ಪಕ್ಕೀರನ ಮನೆಗೆ ಕುಳ್ಳು ಕೊಡಲು ಬಂದಿದ್ದ ಸಾವಕ್ಕನಿಗೆ ಪಕ್ಕೀರನ ಅವ್ವ, “ಅಲ್ಲಬೇ ಸಾವಕ್ಕ, ಮಂತ್ರಿಗೋಳ್ ನಿನ್ನ ಮನೀಗೆ ಬರವರ ಅದಾರ. ಅಂತಾದರಾಗ ನೀ ಇನ್ನೂ ಸೆಗಣಿ ಹುಡಕ್ಕೊಂತ್ ಹೋಗೂದು, ಕುಳ್ಳ ಬಡಿಯೂದ ಮಾಡಾಕತ್ತಿಯಲ್ಲಬೇ” ಅಂದಿದ್ದಳು. “ತಂಗೀ ಅವರು ನನ್ನ ಮನೀಗೆ ಬರೂದರಿಂದ ನನ್ನ ಬದಕ ಏನ್ ಬಂಗಾರ ಆಗೂದುಲ್ಲ. ನಮ್ಮದ ನಮಗ ಇರತತಿ, ಅವರದ ಅವರಗಿ ಇರತತಿ. ಮೈಯ್ಯಾಗ ಕಸುವ್ ಇರೂ ತನಾ ದುಡಿಯೂದು. ಆಮ್ಯಾಲೆ ಆ ಸವದತ್ತಿ ಯಲ್ಲವ್ವ ನೋಡಕೊಂತಾಳು” ಎಂದು ನಿಟ್ಟುಸಿರು ಬಿಟ್ಟಿದ್ದಳು. ‘‘ಹುಚ್ಚಿ ಅದೀಬೆ ನೀ. ಗಂಡ್ ಸತ್ತ್ ಇಷ್ಟ್ ದಿನಾ ಆದರೂ ಒಂದ್ ಪಿಂಚಣಿ ಮಾಡಸಕೊಂಡಿಲ್ಲ. ತಿಂಗ್ ತಿಂಗಳಾ ಬರೂ ಪಿಂಚಣಿ ಮಾಡಸಗೋ. ಮಂತ್ರಿಗೋಳ ನಿನ್ನ್ ಕೈಯ್ಯಾಗs ಅದಾರ” ಎಂದಿದ್ದಳು ಪಕ್ಕೀರನ ಅವ್ವ.



ಪಿಂಚಣಿ ಬರುವ ಹಾಗೆ ಮಾಡಲು ಟಪಾಲು ಹಂಚುವ ಅಶೋಕನನ್ನೇ ಹಿಡಿಯಬೇಕೆಂದು ಒಂದು ದಿನ ಕಾಯ್ದು ಕುಳಿತಳು. “ತಮ್ಮಾ, ಈ ಮುದಕೀಗೆ ಆ ಪಿಂಚಣಿ ಬರೂ ಹಂಗ್ ಮಾಡಿಸಿ ಕೋಡ್ ಯಪ್ಪಾ ನಿನಗ ಪುಣ್ಣೆ ಬರತತಿ” ಎಂದಿದ್ದಳು. “ಬೇ ಯಮ್ಮಾ ಪಿಂಚಣಿ ಬರಬೇಕ ಅಂದರ ಅದಕ್ಕ್ ಅರ್ಜಿ ಕೊಡಬೇಕು, ಅರ್ಜಿ ಹಿಂದ್ ನೀ ಬೀಳಬೇಕ. ಹಂಗs ಏನ್?” ಎಂದು ಸೈಕಲ್ ಹತ್ತಿ ಮಾಯವಾಗಿ ಬಿಟ್ಟ. ಹೇಗಾದರೂ ಮಾಡಿ ಈ ಸಾರಿ ಪಿಂಚಣಿ ಮಾಡಿಸಿಕೊಳ್ಳಬೇಕೆಂದು ಸಾವಕ್ಕ ಮಲ್ಲೇಶ ಮಾಸ್ತರ್ ಮನೆ ಕಡೆಗೆ ನಡೆದಿದ್ದಳು.

ಶುಕ್ರವಾರದ ದಿನ ಜೋಗ್ಯಾಡಿ ಬರುವಷ್ಟರಲ್ಲಿ ಸಾವಕ್ಕನ ಹಿತ್ತಿಲಿನಲ್ಲಿ ಕಲ್ಲು ಇಟ್ಟಿಗೆಗಳು ಬಂದು ಬಿದ್ದಿದ್ದವು. ಇಬ್ಬರು ಗಂಡಾಳುಗಳು ನೆಲವನ್ನು ಅಗೆಯುತ್ತಿದ್ದರು. ಸಾವಕ್ಕ ಬಾಯಿ ತೆಗೆಯುವಷ್ಟರಲ್ಲಿಯೇ ಅವರಲ್ಲೊಬ್ಬ, “ಸಾವಕ್ಕಾ ಇನ್ ನೀ ಹರ್ಯಾಗೆದ್ದು ಚರಗಿ ಹಿಡಕೊಂಡ್ ಕೆರಿ ಅಂಗಳಕ್ಕ್ ಹೋಗೂದು ತಪ್ಪತ ನೋಡಬೇ. ಮಂತ್ರಿಗೋಳ್ ಹೆಸರಿನ್ಯಾಗ ನಿನ್ನ ಮನೀಗೊಂದ್ ಪಾಯ್ಖಾನಿ ಆದಂಗ್ ಆತ ನೋಡು. ಅದೇನ್ ಪುಣ್ಯೆ ಮಾಡಿಯಬೇ ಮುದಕಿ” ಎಂದು ನಗತೊಡಗಿದ. ಆ ಮಾತಿಗೆ, “ಅಲ್ಲೋ ತಮ್ಮಾ ಒಂದ್ ದಿವಸದ ಪುರತೇಕ್ ಬರತಾರ ಅಂತ. ಇಷ್ಟ್ ಖರಚ್ ಮಾಡಿದರ ಯದಕ್ ಬಂತು?’’ ಎಂದು